ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಮಗೆ ಇದುವರೆವಿಗೂ ಯಾವುದೇ ರೀತಿಯ time table ಬಂದಿಲ್ಲ. ನಾವು ಯಾವ ದಿನದಂದು question ಕೇಳಬೇಕೆನ್ನುವುದು ಗೊತ್ತಿಲ್ಲ. ಸರಿಯಾದ ಸಮಯಕ್ಕೆ ನೋಟೀಸ್ ಹೋಗಬೇಕು. ಅಧಿವೇಶನವನ್ನು ಬೇಕಾ ಬಿಟ್ಟಿ ನಡೆಸುತ್ತೀರಾ?

(ಗೊಂದಲ)

Mr. SPEAKER : That is a different issue. No, ಹೀಗೆ ಹೇಳುವುದಕ್ಕೆ ಬರುವುದಿಲ್ಲ. Under Rule 3, Rules ಪ್ರಕಾರ ಇದೆ.

(ಗೊಂದಲ)

ಅಧ್ಯಕ್ಷರು : ಬೇಕಾಬಿಟ್ಟಿ ಏನಿಲ್ಲ, as per the Rules.

ಶ್ರೀ ಟಿ.ಬಿ. ಜಯಚಂದ್ರ : ಈ ವಿಧಾನ ಸಭೆಗೆ ತನ್ನದೇ ಒಂದು ಘನತೆ, ಗೌರವವಿದೆ. ಅದನ್ನು ಎತ್ತಿ ಹಿಡಿಯಬೇಕಾಗುತ್ತದೆ. ನಮಗೆ ಯಾವುದೇ ರೀತಿಯ ನೋಟೀಸ್ ಬಂದಿಲ್ಲ. ನಮಗೇ ಗೊತ್ತೇ ಇಲ್ಲ.

(ಗೊಂದಲ)

Mr. SPEAKER : I am clarifying to you that the summoning of the House is as per Rules. ಎಲ್ಲಾ Rules ಪ್ರಕಾರ ಇದೆ. Please read out rule (3). Rule 3 comply ಮಾಡಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ವಿ.ಎಸ್. ಆಚಾರ್ಯರಿಗೆ ಗೌರವ ಸಲ್ಲಿಸುವುದಕ್ಕೆ ಎಲ್ಲರೂ ಕಾತುರರಾಗಿದ್ದಾರೆ. ಆದರೆ ಯಾರಿಗೂ ನೋಟೀಸ್ ಹೋಗಿಲ್ಲ.

(ಗೊಂದಲ)

ಅಧ್ಯಕ್ಷರು : ತಾವು ಕೇಳಿರುವುದಕ್ಕೆ ವಿವರಣೆಯನ್ನು ಕೊಟ್ಟಿದ್ದೇನೆ. ದಯವಿಟ್ಟು ಸಹಕರಿಸಿ. ನಾವೆಲ್ಲರೂ ಸಂತಾಪ ಸೂಚನೆಯನ್ನು ಮಾಡೋಣ.

ಶ್ರೀ ಆರ್. ಅಶೋಕ್ : ಮಾನ್ಯ ಸಭಾಧ್ಯಕ್ಷರೇ, ಇದು ಸಂತಾಪ ಸೂಚನಾ ಸಭೆ. ದಯವಿಟ್ಟು ಅವಕಾಶ ಮಾಡಿಕೊಡಿ.

ಶ್ರೀ ಟಿ.ಬಿ. ಜಚಂದ್ರ : ಸಂತಾಪ ಸೂಚನೆಗೆ ನಾವು ಭಾಗವಹಿಸುತ್ತೇವೆ. ಆ ಪ್ರಶ್ನೆ ಬೇರೆ. ಎಲ್ಲರಿಗೂ ಭಾಗವಹಿಸಬೇಕೆಂಬ ಆಸೆ ಇತ್ತಲ್ಲ, ಅದು ಹಕ್ಕುಚ್ಯುತಿ ಆಯಿತಲ್ಲವೇ?

(ಗೊಂದಲ)

ಅಧ್ಯಕ್ಷರು : ಇದು ಹಕ್ಕುಚ್ಯುತಿ ಪ್ರಶ್ನೆ ಬರುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ವಿಧಾನಸಭೆ ಎಂದರೆ ಕನಿಷ್ಠ 15 ದಿನಕ್ಕೆ ಮುಂಚೆ ನೋಟೀಸ್ ಹೋಗಬೇಕು. ಯಾರಿಗೂ ನೋಟೀಸ್ ಹೋಗಿಲ್ಲ.

ಅಧ್ಯಕ್ಷರು : ಆ ರೀತಿಯಾದ ಯಾವುದೇ ನಿಯಮವಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : Rules ಇರಬೇಕೆನ್ನುವುದಿಲ್ಲ, Natural Justice ಪ್ರಕಾರ ನಡೆಸಬೇಕಲ್ಲವೇ?

ಅಧ್ಯಕ್ಷರು : ಸದನವನ್ನು Natural Justice ಪ್ರಕಾರ ನಡೆಸುವುದಕ್ಕಾಗುವುದಿಲ್ಲ. We are bound by the Rules of Procedure. ಎಲ್ಲದಕ್ಕೂ Natural Justice, Natural Justice. . . . . .

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ರಾಜ್ಯಪಾಲರ ಒಪ್ಪಿಗೆ ಆದ ಮೇಲೆ ನಮಗೆ ಯಾವುದೇ ರೀತಿಯ ನೋಟೀಸ್ ಬಂದಿಲ್ಲ. ಪತ್ರಿಕೆಯಲ್ಲಿ ಕೇಳಿದ್ದೇವೆ.

ಅಧ್ಯಕ್ಷರು : This is incompliance of the Rules and Prodecure adopted by this House, it is in accordance with the Rules and Procedure, I have given the Ruling, ದಯವಿಟ್ಟು ಸಹಕರಿಸಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಸಾರ್ವಜನಿಕರಿಗೆ ಗೊತ್ತಾಗಬೇಕು.

(ಗೊಂದಲ)

ಶ್ರೀ ಆರ್. ಅಶೋಕ್ : ಇದು ಸಂತಾಪ ಸೂಚಕ ಸಭೆ. ಡಾ. ಆಚಾರ್ಯ ಅವರು ನಮ್ಮ ಪಕ್ಷದ ಹಿರಿಯ ಸದಸ್ಯರು. ದಯವಿಟ್ಟು ಸಹಕರಿಸಿ.

ಶ್ರೀ ಸಿದ್ದರಾಮಯ್ಯ : Ruling Party ಯವರಾದ ನೀವೇ ಹೀಗೆ ಎದ್ದು ನಿಂತರೆ ಹೇಗೆ? ನಾವು ಬದುಕಬೇಕೋ ಬೇಡವೋ? ಒಂದೇ ನಿಮಿಷ, ಆಮೇಲೆ ಮಾತನಾಡಿ. ರಾಮದಾಸ್ ಅವರೆ, I know that you are very well acquainted with the Rules. ಮಾನ್ಯ ಅಧ್ಯಕ್ಷರೆ, Rule 39 ನೋಡಿ.